**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ.**
**ಎಫ್.ಡಿ.ಪಿ.ನಂ.8/2013**

**ನ್ಯಾಯಾಲಯದ ಸಾಕ್ಷಿ-1**

| | |
|---|---|
| **ಹೆಸರು** | ಮಲ್ಲಿಕಾರ್ಜುನ |
| **ತಂದೆ ಹೆಸರು** | ಸೋಮಣ್ಣ |
| **ವಯಸ್ಸು** | 35 ವರ್ಷಗಳು |
| **ಉದ್ಯೋಗ** | ತಾಲೂಕಾ ಸರ್ವೆಯರ |
| **ವಾಸ ಸ್ಥಳ** | ಜೇವರ್ಗಿ |

**ಸಾಕ್ಷಿಯನ್ನ ದಿನಾಂಕ 06-08-2021 ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ನ್ಯಾಯಾಲಯದಿಂದ**

ನಾನು ಜೇವರ್ಗಿ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಯಲ್ಲಿ ತಾಲೂಕಾ ಸರ್ವೆಯರಾಗಿ 2014 ನೇ ಸಾಲಿನಿಂದ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕ 09-02-2021 ರಂದು ನನಗೆ ಈ ಪ್ರಕರಣದಲ್ಲಿ ಹಾಲಗತ್ತರಗಾ ಗ್ರಾಮದ ಸರ್ವೆ ನಂಬರ್ 9 ಮತ್ತು 47 ರಲ್ಲಿ ಅಳತೆ ಕಾರ್ಯ ಮಾಡಿ ಹಿಸ್ಸಾ ಮಾಡಲು ಮಾನ್ಯ ನ್ಯಾಯಾಲಯದಿಂದ ವಾರೆಂಟನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 02-03-2021 ರಂದು ನಾನು ಈ ಪಕರಣದ ಎಲ್ಲಾ ಪಕ್ಷಗಾರರಿಗೆ ದಿನಾಂಕ 10-03-2021 ರಂದು ಸ್ಥಳದಲ್ಲಿ ಹಾಜರಾಗುವಂತೆ ಆರ್.ಪಿ.ಎ.ಡಿ ಮುಖಾಂತರ ನೋಟಿಸ ನೀಡಿರುತ್ತೇನೆ. ದಿನಾಂಕ 10-03-2021 ರಂದು ನ್ಯಾಯಾಲಯದ ಆದೇಶ ಮತ್ತು ಸರ್ವೆ ದಾಖಲಾತಿಗಳೊಂದಿಗೆ ಬೆಳಿಗ್ಗೆ 11-00 ಗಂಟೆಗೆ ಹಾಲಗತ್ತರಗಾ ಗ್ರಾಮದ ಸರ್ವೆ ನಂಬರ್ 9 ಮತ್ತು 47 ರಲ್ಲಿ ಭೇಟಿ ನೀಡಿದಾಗ ಸ್ಥಳದಲ್ಲಿ ವಾದಿ, ಪ್ರತಿವಾದಿಗಳು ಹಾಗೂ ಗ್ರಾಮಸ್ಥರು ಇದ್ದರು.

ಸರ್ವೆ ದಾಖಲೆಗಳು ಮತ್ತು ನ್ಯಾಯಾಲಯದ ಆದೇಶದ ಮೇರೆಗೆ ಸರ್ವೆ ಕಾರ್ಯ ಪೂರೈಸಿರುತ್ತೇನೆ. ಸರ್ವೆ ನಂಬರ್ 9 ರಲ್ಲಿ ಹಾಗೂ ಸರ್ವೆ ನಂಬರ್ 47 ರಲ್ಲಿ ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ 2 ಹಿಸ್ಸೆಗಳನ್ನು ಮಾಡಿರುತ್ತೇನೆ. ನಂತರ ನಕಾಶೆಯನ್ನು ತಯಾರು ಮಾಡಿ ವರದಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಈಗ ನೋಟಿಸಿನ ಪ್ರತಿಯನ್ನು ನೋಡುತ್ತಿದ್ದು ಸದರಿ ನೋಟಿಸನ್ನು ಈ ಪ್ರಕರಣದ ಪಕ್ಷಗಾರರಿಗೆ ನೀಡಿರುತ್ತೇನೆ. ಸಾಕ್ಷಿಯು ಸದರಿ ನೋಟಿಸನ್ನು ನೋಡಿ ಗುರುತಿಸಿದ್ದರಿಂದ ಸದರಿ ನೋಟಿಸನ್ನು ನಿಸಿ-1 ಎಂದು ಗುರುತಿಸಲಾಯಿತು. 5 ಅಂಚೆ ರಸೀದಿಗಳನ್ನು ಸಹ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ರಸೀದಿಗಳನ್ನು ಒಟ್ಟಾಗಿ ನಿಸಿ-2 ಎಂದು ಗುರುತಿಸಲಾಯಿತು. ನಾನು ಮಾನ್ಯ ನ್ಯಾಯಾಲಯಕ್ಕೆ ಪಕ್ಷಗಾರರ ಹೇಳಿಕೆ ಪತ್ರಗಳು ಹಾಗೂ ನಾನು ತಯಾರಿಸಿದ ನಕ್ಷೆಗಳನ್ನು ವರದಿಯೊಂದಿಗೆ ಸಲ್ಲಿಸಿರುತ್ತೇನೆ. ಸದರಿ ಎಲ್ಲಾ ದಾಖಲಾತಿಗಳನ್ನು ಒಟ್ಟಾಗಿ ವರದಿಯೊಂದಿಗೆ ನಿಸಿ-3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ - ಇರುವುದಿಲ್ಲ.**

**ಪಾಟೀ ಸವಾಲುಃ 4 ನೇ ಎದುರುದಾರರ ಪರ ವಕೀಲರಾದ ಶ್ರೀ ಎ. ದೊಡ್ಡಮನಿಯವರಿಂದ.**

ಸ್ಕೆಚನಲ್ಲಿ ಖರಾಬನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯು ಸ್ಕೆಚಗೆ ಲಗತ್ತಾದ ವಾಟಾಪತ್ರದಲ್ಲಿ ನಮೂದಿಸಿದ್ದೇನೆ ಎಂದು ಹೇಳುತ್ತಾರೆ. ಸರ್ವೆ ನಂಬರ 9 ರ ಸ್ವತ್ತು ಗ್ರಾಮಕ್ಕೆ ಲಗತ್ತಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 9 ರ

ಪೂರ್ವ-ಉತ್ತರ ದಿಕ್ಕಿನಲ್ಲಿ ಗ್ರಾಮ ಇರುತ್ತದೆ. ಸರ್ವೆ ನಂಬರ 9 ರ ಸ್ವತ್ತಿಗೆ ಸಂಬಂಧಿಸಿ ನಾನು ಮಾಡಿರುವ ನಕಾಶೆಯಲ್ಲಿ ಹಸಿರು ಬಣ್ಣದಲ್ಲಿ ನಮೂದಿಸಿರುವ ರೊಮನ್ ಸಂಖ್ಯೆ 1 ರ ಸ್ವತ್ತಿಗೆ ಲಗತ್ತಾಗಿ ಮುಖ್ಯ ರಸ್ತೆ ಇದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಪಕ್ಕದಲ್ಲಿ ಅರಳಗುಂಡಗಿಗೆ ಹೋಗುವ ರಸ್ತೆ ಇದೆ ಎಂದರೆ ಸಾಕ್ಷಿಯು ಬಂಡಿ ದಾರಿ ಇರುತ್ತದೆ ಎಂದು ಹೇಳುತ್ತಾರೆ. ಸದರಿ ಬಂಡಿ ದಾರಿಯು ನಾನು ನಕಾಶೆಯಲ್ಲಿ ತೋರಿಸಿರುವ ಬ್ಲಾಕ ನಂಬರ 1 ರಲ್ಲಿ ಇರುತ್ತದೆ ಎಂದರೆ ನಿಜ. ಸದರಿ ದಾರಿಯನ್ನು ಸ್ಕೆಚನಲ್ಲಿ ತೋರಿಸಿಲ್ಲ ಎಂದರೆ ನಿಜ. ಆ ರೀತಿ ಸ್ಕೆಚನಲ್ಲಿ ತೋರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸರ್ವೆ ನಂಬರ 9 ಕ್ಕೆ ಲಗತ್ತಾಗಿ ಮನೆಗಳು ಇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂಬರ್ 8 ರಲ್ಲಿ ಶಾಲೆ ಮತ್ತು ಮನೆಗಳು ಇರುತ್ತವೆ ಎಂದು ಹೇಳುತ್ತಾರೆ. ಸರ್ವೆ ನಂಬರ 9 ರಲ್ಲಿ ಸಹ ಒಂದು ಭಾಗದಲ್ಲಿ ಮನೆಗಳು ಇರುತ್ತವೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 9 ರಲ್ಲಿ ನನ್ನ ನಕಾಶೆಯಲ್ಲಿ ತೋರಿಸಿರುವ ಬ್ಲಾಕ ನಂಬರ 1 ರ ಸ್ವತ್ತಿನ ಬೆಲೆ ಹೆಚ್ಚಿದೆ ಎಂದರೆ ಸರಿಯಲ್ಲ. ನಕಾಶೆಯಲ್ಲಿ ಬ್ಲಾಕ ನಂಬರ 2 ಕ್ಕೆ ದಾರಿ ತೋರಿಸಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಆದರೆ ಸ್ಥಳದಲ್ಲಿ ದಾರಿ ಇರುತ್ತದೆ ಎಂದು ಹೇಳುತ್ತಾರೆ.

ಸರ್ವೆ ನಂಬರ 9 ರಲ್ಲಿ ಮಣ್ಣಿನ ಸ್ವರೂಪ ಕೆಂಪು, ಕಪ್ಪು ಮತ್ತು ಮರಳು ಮಿಶ್ರೀತ ಇರುತ್ತದೆ ಎಂದರೆ ನಿಜ. ನಕಾಶೆಯನ್ನು ಕಛೇರಿಗೆ ಬಂದ ನಂತರ ಮಾಡಿದ್ದೇನೆ ಎಂದರೆ ನಿಜ. ಹೇಳಿಕೆಯನ್ನು ಕಛೇರಿಗೆ ಬಂದ ನಂತರ ಬರೆದಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ಸ್ಥಳದಲ್ಲಿ ಬರೆದಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 47 ರ ಪಕ್ಕದಲ್ಲಿ ಹಳ್ಳ ಇದೆ ಎಂದರೆ ನಿಜ. ನೀರಿನ ಏರಿಳಿತದಿಂದ ಭೂಮಿಯ ಫಲವತ್ತತೆ ಹೆಚ್ಚು ಕಡಿಮೆ ಅಗುತ್ತದೆ ಎಂದರೆ ನಿಜ. ಸರ್ವೆ ನಂಬರ್ 47 ರ ನಕಾಶೆಯಲ್ಲಿ ಸಹ ಬಂಡಿ ದಾರಿ ಆಗಲಿ, ಕಾಲು ದಾರಿ ಅಗಲಿ ತೋರಿಸಿಲ್ಲ ಎಂದರೆ ನಿಜ. ಈಗ ನಾನು ಒಂದು ಫೋಟೊ ನೋಡುತ್ತಿದ್ದು ಸದರಿ ಫೋಟೊದಲ್ಲಿರುವ ರಸ್ತೆ ಅರಗುಂಡಗಿ ಗ್ರಾಮಕ್ಕೆ ಹೋಗುವ ರಸ್ತೆ ಎಂದರೆ ಸಾಕ್ಷಿಯು ನಾನು ಆಳತೆ ಮಾಡುವ ಕಾಲಕ್ಕೆ ಸದರಿ ರಸ್ತೆ ಇರಲಿಲ್ಲ ಎಂದು ಹೇಳುತ್ತಾರೆ. ನಾನು ಈಗ ಮತ್ತೊಂದು ಫೋಟೊ ನೋಡುತ್ತಿದ್ದು ಅದರಲ್ಲಿ ಕಾಣುತ್ತಿರುವ ಮನೆಗಳು ಸರ್ವೆ ನಂಬರ್ 9 ರಲ್ಲಿ ಇವೆ ಎಂದರೆ ಸರಿಯಲ್ಲ. ನನ್ನ ನಕಾಶೆಯಲ್ಲಿ ಬ್ಲಾಕ್ ನಂಬರ 1 ಒಂದು ಪಕ್ಷಗಾರರಿಗೆ ಹಾಗೂ ಬ್ಲಾಕ ನಂಬರ 2 ಮತ್ತೊಂದು ಪಕ್ಷಗಾರರಿಗೆ ತೋರಿಸಿದ್ದೇನೆ ಎಂದರೆ ನಿಜ. ಎದುರುದಾರರು ಸಹಿಗಳನ್ನು ಹೇಳಿಕೆಯಲ್ಲಿ ಪಡೆದುಕೊಂಡಡಿಲ್ಲ ಎಂದರೆ ಸಾಕ್ಷಿಯು ಅವರು ನಿರಾಕರಿಸಿರುತ್ತಾರೆ ಎಂದು ಹೇಳುತ್ತಾರೆ. ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ಸರ್ವೆ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಕಛೇರಿಯಲ್ಲಿ ಕುಳಿತು ವರದಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೆ.ಸರಿ.ಇದೆ.**

ದಿವಾಣಿ ನ್ಯಾಯಾಧೀಶರು ಮತ್ತು
**ಪ್ರ.ದ.**ನ್ಯಾಯಿಕ ದಂಡಾಧಿಕಾರಿಗಳು**,**
ಜೇವರ್ಗಿ